# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ – ಸೆಪ್ಟೆಂಬರ್ – 2019

## 8 ನೆಯ ತರಗತಿ – ಪ್ರಥಮ ಭಾಷೆ ಕನ್ನಡ – ಪ್ರಶ್ನೆ ಪತ್ರಿಕೆ

**ಸಮಯ : 01–30 ಗಂಟೆಗಳು** **ಗರಿಷ್ಠ ಅಂಕಗಳು : 40**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **4 * 1 = 4**

1. 'ಹಸನ್ಮುಖ' ಪದದಲ್ಲಿರುವ ಮಹಾಪ್ರಾಣಾಕ್ಷರವಿದು;
   (ಎ) ಹ (ಬಿ) ಸ
   (ಸಿ) ನ್ಮು (ಡಿ) ಖ
2. 'ಶಿಕ್ಷಣವನ್ನು' ಪದದಲ್ಲಿರುವ ವಿಭಕ್ತಿಯ ಹೆಸರು;
   (ಎ) ಪ್ರಥಮ (ಬಿ) ದ್ವಿತೀಯ
   (ಸಿ) ತೃತೀಯ (ಡಿ) ಚತುರ್ಥಿ
3. ಇವುಗಳಲ್ಲಿ ಕನ್ನಡದ ಲೋಪ ಸಂಧಿಗೆ ಉದಾಹರಣೆಯಾದ ಪದವಿದು;
   (ಎ) ಹೆಗಲುಗೊಟ್ಟು (ಬಿ) ಸಂತಸಬಟ್ಟು
   (ಸಿ) ಬಾನಿನೆಡೆ (ಡಿ) ಬೆಳದಿಂಗಳು
4. ನಾಲ್ಕು ಸಾಲಿನ ಪದ್ಯವನ್ನು ಹೀಗೆನ್ನುವರು;
   (ಎ) ಚೌಪದಿ (ಬಿ) ತ್ರಿಪದಿ
   (ಸಿ) ಷಟ್ಪದಿ (ಡಿ) ಅಷ್ಟಪದಿ

**II. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **4 * 1 = 4**

5. ರಹೀಮನು ಮಗ್ಗವನ್ನು ಮುಟ್ಟದೆ ಎಷ್ಟು ವರ್ಷಗಳಾಗಿತ್ತು?
6. ಮನೆಗೆ ಬಂದವರನ್ನು ಸತ್ಕರಿಸುವ ಸಂಪ್ರದಾಯ ನಮ್ಮಲ್ಲಿ ಹೇಗಿದೆ?
7. ಕನ್ನಡ ತಾಯಿಯು ಹಾಡನ್ನು ಯಾವುದರಿಂದ ಉಕ್ಕಿಸಬೇಕು?
8. ಪುಟ್ಟ ಮಗುವು ತೊಟ್ಟಿಲಲ್ಲಿ ಹೇಗೆ ಮಲಗಿದೆ?

**III. ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **4 * 2 = 8**

9. ಲೇಖಕ ಬಾಗಲೋಡಿ ದೇವರಾಯ ಅವರ ತಂದೆಯವರು ಮಿಠಾಯಿಯನ್ನು ಕೊಟ್ಟದ್ದಕ್ಕೆ ಅತಿಥಿಗಳು ಏಕೆ ಆಕ್ಷೇಪಣೆ ಮಾಡಿದರು?
10. ತಾಯಿ ತನ್ನ ಮಗುವಿನ ಆರೈಕೆಯನ್ನು ಹೇಗೆ ಮಾಡುತ್ತಾಳೆ ಎಂದು ಕೆ. ಎಸ್. ನರಸಿಂಹಸ್ವಾಮಿ ಅವರು ವರ್ಣಿಸುತ್ತಾರೆ?
11. ನಾವು ಹೊಸನಾಡೊಂದನ್ನು ಹೇಗೆ ಕಟ್ಟುವೆವು ಎಂದು ಗೋಪಾಲಕೃಷ್ಣ ಅಡಿಗ ಅವರು ಹೇಳುತ್ತಾರೆ?
12. ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಬದುಕು ಹೇಗೆ ಧನ್ಯವಾಗುವುದು?

**IV. ಕೆಳಗಿನ ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2 * 2 = 4**

13. ನೇಮಿಚಂದ್ರ
14. ಚೆನ್ನವೀರ ಕಣವಿ

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **2 * 2 = 4**

15. "ಅದು ಕಲಾಶ್ರೀ ವಿಹರಿಸುವ ನಂದನವನ"
16. "ಅಮರ ಪ್ರೇಮದ ಒರತೆ ಹರಿಯುವುದು ಉಂಟು ಅಲ್ಲಲ್ಲಿ"

**VI. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1 * 2 = 2**

17. ಜೈನರಾದ ________________

________________________

________________________

________________________ ಜನ್ನರ ।

ಅಥವಾ

ಲಕ್ಷ್ಮೀಪತಿ ____________________

________________________

________________________

________________________ ವಿದ್ಯಾರಣ್ಯರ ।

**VII. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಆಧರಿಸಿ ಸಾರಾಂಶವನ್ನು ಬರೆಯಿರಿ.** **1 * 2 = 2**

18. ಉಪ್ಪಿಗಿಂತ ರುಚಿಯು ತಾಯಿಗಿಂತಲು ಬಂಧು
ಇಲ್ಲೆಂಬ ಗಾದೆನುಡಿ ಕೇಳಿರುವೆನು.
ಗೆಳೆತನದ ಶುಚಿರುಚಿಯು ಇದಕು ಮಿಗಿಲಾಗಿಹುದು
ಎಂಬ ಸಾಹಸ ಮಾಡೆ ದೋಷವೇನು?
ಕಂಡ ಕಂಡವರೇನು ಬಲ್ಲರಿದನು
ಉಂಡವನು ಕಂಡಿಹನು ಇದರ ಹದನು.

**VIII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1 * 4 = 4**

19. ಡಿ. ವಿ. ಜಿ. ಅವರ ವ್ಯಕ್ತಿತ್ವದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.

ಅಥವಾ

ಡಿ. ವಿ. ಜಿ. ಅವರಿಗೂ ಅವರ ಶ್ರೀಮತಿ ಅವರಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

**IX. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 01*04 =04 (2+2)**

20. ಮಹಾತ್ಮ ಬಸವಣ್ಣನವರು ಕಟ್ಟಬಯಸಿದ್ದು ಸರ್ವಶೋಷಣೆಗಳಿಂದಲೂ ಮುಕ್ತವಾದ, ಸ್ವಾತಂತ್ರ್ಯ, ಸಮಾನತೆ, ಸೌಹಾರ್ದಗಳ ಅಡಿಗಲ್ಲಿನ ಮೇಲೆ ನಿಂತ, ಸರ್ವೋದಯ ನಿಷ್ಠವಾದ ಒಂದು ಆದರ್ಶ ಸಮಾಜವನ್ನು. ಅವರು ಕಲ್ಪಿಸಿಕೊಂಡು ಕಟ್ಟಬಯಸಿದ ನೂತನ ಸಮಾಜದ ಒಂದು ಮುಖ್ಯಾಧಾರವೆಂದರೆ ಕಾಯಕ ತತ್ತ್ವ. ಕಾಯಕಕ್ಕೆ ಬಸವಣ್ಣನವರಿತ್ತ ಪ್ರಾಧಾನ್ಯ ಅತ್ಯಂತ ಗಮನಾರ್ಹವಾದುದು. ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಏನಾದರೊಂದು ದೈಹಿಕವಾದ ಕೆಲಸ ಮಾಡಬೇಕು, ಅದರಿಂದಲೇ ಜೀವನ ನಡೆಸಬೇಕು ಎಂಬುದು ಕಾಯಕ ತತ್ತ್ವದ ಒಂದು ಮುಖವಾದರೆ, ಯಾವ ಕೆಲಸವೂ ಕೀಳಲ್ಲ ಪ್ರತಿಯೊಂದು ಕೆಲಸವೂ ಪವಿತ್ರ ಎನ್ನುವುದು ಇನ್ನೊಂದು ಮುಖ. ಅನೇಕ ಸಾಮಾಜಿಕ ಆರ್ಥಿಕ ಸಮಸ್ಯೆಗಳಿಗೆ ರಾಮಬಾಣವಾಗಬಲ್ಲದು ಈ ಕಾಯಕ ತತ್ತ್ವ ಸಮಾಜದ ಅಸಮತೆ, ದಾರಿದ್ರ್ಯಗಳನ್ನು ನಿವಾರಿಸುವ ಏಕೈಕ ಮಂತ್ರವಾಗಿದೆ. 'ಕಾಯಕವೇ ಕೈಲಾಸ'.

ಬಸವಣ್ಣನವರು ಸಂಸಾರ ತ್ಯಾಗವನ್ನು ವಿರೋಧಿಸುವುದಿಲ್ಲ. ಸಂಸಾರದಲ್ಲಿದ್ದುಕೊಂಡೇ ಪರಮಾರ್ಥವನ್ನು ಸಾಧಿಸುವ ಕಲೆಯನ್ನು ಅವರು ಉಪದೇಶಿಸಿದ್ದಾರೆ. ಅಂತರಂಗ–ಬಹಿರಂಗಗಳ ಸಾಮರಸ್ಯವನ್ನು ಅವರು

ವಿಶೇಷವಾಗಿ ಒತ್ತಿ ಹೇಳಿದ್ದಾರೆ. ಒಳ್ಳೆಯ ಆಲೋಚನೆ, ಆಲೋಚನೆಗೆ ತಕ್ಕ ನುಡಿ, ನುಡಿಗೆ ತಕ್ಕ ನಡೆ ಇವುಗಳನ್ನು ಬೋಧಿಸಿದ್ದಾರೆ. 'ನುಡಿಗೆ ತಕ್ಕ ನಡೆಯ ಕಂಡರೆ ಕೂಡಲಸಂಗಮದೇವ ತನ್ನೊಳಗಿರ್ಪನಯ್ಯ' ಎಂಬುದು ಅವರ ಆಶ್ವಾಸನೆ. ಅಂತರಂಗದ ಅರಿವು, ಬಹಿರಂಗದ ಕ್ರಿಯೆ ಎರಡಕ್ಕೂ ಅವರು ಸಮಾನ ಪುರಸ್ಕಾರ ನೀಡಿದ್ದಾರೆ.

**ಪ್ರಶ್ನೆಗಳು**

ಅ. ಕಾಯಕ ತತ್ತ್ವ ಸಮಾಜದ ಅಸಮತೆ, ದಾರಿದ್ರ್ಯಗಳನ್ನು ನಿವಾರಿಸುವ ಏಕೈಕ ಮಂತ್ರವಾಗಿದೆ ಏಕೆ?

ಆ. ಬಸವಣ್ಣ ಅವರು ಅಂತರಂಗದ ಅರಿವು, ಬಹಿರಂಗದ ಕ್ರಿಯೆ ಎರಡಕ್ಕೂ ಹೇಗೆ ಸಮಾನ ಪುರಸ್ಕಾರ ನೀಡಿದ್ದಾರೆ?

**X. ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಉತ್ತರ ಬರೆಯಿರಿ.** **1 * 4 = 4**

21. ನಿಮ್ಮನ್ನು ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಬಿದರಗೂಡು ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಅನುಶ್ರೀ' ಭಾವಿಸಿಕೊಂಡು, ನೆರೆ ಹಾವಳಿಯಿಂದ ನೊಂದ ಸಂತ್ರಸ್ತರಿಗೆ ಪರಿಹಾರವನ್ನು ದೊರಕಿಸಿ ಕೊಡುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆಯಿರಿ.

ಅಥವಾ

'ರಾಷ್ಟ್ರೀಯ ಹಬ್ಬಗಳು' ಎಂಬ ವಿಷಯವನ್ನು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.

---- 0 ----

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ ಸೆಪ್ಟೆಂಬರ್ – 2019

## 8 ನೆಯ ತರಗತಿ – ಪ್ರಥಮ ಭಾಷೆ ಕನ್ನಡ – ಪ್ರಶ್ನೆ ಪತ್ರಿಕೆ

# ಮೌಲ್ಯಮಾಪನ ಸೂಚಿ (ಮಾದರಿ ಉತ್ತರ)

**ಸಮಯ : 1–30 ಗಂಟೆಗಳು** **ಗರಿಷ್ಠ ಅಂಕಗಳು : 40**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 4 * 1 = 4**

**(ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. 'ಹಸನ್ಮುಖ' ಪದದಲ್ಲಿರುವ ಮಹಾಪ್ರಾಣಾಕ್ಷರವಿದು;

   (ಎ) ಹ (ಬಿ) ಸ
   (ಸಿ) ನ್ಮು (ಡಿ) ಖ

   **ಉತ್ತರ : (ಡಿ) ಖ**

2. 'ಶಿಕ್ಷಣವನ್ನು' ಪದದಲ್ಲಿರುವ ವಿಭಕ್ತಿಯ ಹೆಸರು;

   (ಎ) ಪ್ರಥಮ (ಬಿ) ದ್ವಿತೀಯ
   (ಸಿ) ತೃತೀಯ (ಡಿ) ಚತುರ್ಥಿ

   **ಉತ್ತರ : (ಬಿ) ದ್ವಿತೀಯ**

3. ಇವುಗಳಲ್ಲಿ ಕನ್ನಡದ ಲೋಪ ಸಂಧಿಗೆ ಉದಾಹರಣೆಯಾದ ಪದವಿದು;

   (ಎ) ಹೆಗಲುಗೊಟ್ಟು (ಬಿ) ಸಂತಸಬಟ್ಟು
   (ಸಿ) ಬಾನಿನೆಡೆ (ಡಿ) ಬೆಳದಿಂಗಳು

   **ಉತ್ತರ : (ಸಿ) ಬಾನಿನೆಡೆ**

4. ನಾಲ್ಕು ಸಾಲಿನ ಪದ್ಯವನ್ನು ಹೀಗೆನ್ನುವರು;

   (ಎ) ಚೌಪದಿ (ಬಿ) ತ್ರಿಪದಿ
   (ಸಿ) ಷಟ್ಪದಿ (ಡಿ) ಅಷ್ಟಪದಿ

   **ಉತ್ತರ : (ಎ) ಚೌಪದಿ**

**II. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 4 * 1 = 4**

**(ಪ್ರತಿ ಸರಿಯುತ್ತರಕ್ಕೆ ಒಂದು ಅಂಕ)**

5. ರಹೀಮನು ಮಗ್ಗವನ್ನು ಮುಟ್ಟದೆ ಎಷ್ಟು ವರ್ಷಗಳಾಗಿತ್ತು?
   ಬಾಗಲೋಡಿಯ ಅಬ್ದುಲ್ ರಹೀಮ್ ಸಾಹೇಬನು ಮಗ್ಗವನ್ನು ಮುಟ್ಟದೆ **ಇಪ್ಪತ್ತು** ವರ್ಷಗಳಾಗಿತ್ತು.
6. ಮನೆಗೆ ಬಂದವರನ್ನು ಸತ್ಕರಿಸುವ ಸಂಪ್ರದಾಯ ನಮ್ಮಲ್ಲಿ ಹೇಗಿದೆ?
   ಮನೆಗೆ ಬಂದವರನ್ನು ಕುಡಿಯಲು ಮೊದಲು ನೀರನ್ನು ಕೊಟ್ಟು ಸತ್ಕರಿಸುವ ಸಂಪ್ರದಾಯ ನಮ್ಮಲ್ಲಿದೆ.
7. ಕನ್ನಡ ತಾಯಿಯು ಹಳೆಯ ಹಾಡನ್ನು ಯಾವುದರಿಂದ ಉಕ್ಕಿಸಬೇಕು?
   ಕನ್ನಡ ತಾಯಿಯು ಹಳೆಯ ಹಾಡನ್ನು **ಹೊಸತು ಕಿನ್ನರಿಯಿಂದ** ಉಕ್ಕಿಸಬೇಕು.
8. ಪುಟ್ಟ ಮಗುವು ತೊಟ್ಟಿಲಲ್ಲಿ ಹೇಗೆ ಮಲಗಿದೆ?
   ಪುಟ್ಟ ಮಗುವು ತೊಟ್ಟಿಲಲ್ಲಿ ಕಣ್ಣರ್ಧ ಮುಚ್ಚಿ, ಬರಿ ಮೈಯಲ್ಲಿ ಮಲಗಿದೆ.

**III. ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **4 * 2 = 8**

**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು)**

9. ಲೇಖಕ ಬಾಗಲೋಡಿ ದೇವರಾಯ ಅವರ ತಂದೆಯವರು ಮಿಠಾಯಿಯನ್ನು ಕೊಟ್ಟದ್ದಕ್ಕೆ ಅತಿಥಿಗಳು ಏಕೆ ಆಕ್ಷೇಪಣೆ ಮಾಡಿದರು?
   ಲೇಖಕ ಬಾಗಲೋಡಿ ದೇವರಾಯ ಅವರ ತಂದೆಯವರು ಮಿಠಾಯಿಯನ್ನು ಕೊಟ್ಟಿದ್ದಕ್ಕೆ ಅತಿಥಿಗಳು "ರಾಯರೆ, ಅಂಗಡಿಯಲ್ಲಿ ತೆಗೆದುಕೊಳ್ಳಲು ನಮ್ಮಲ್ಲಿ ಹಣವಿಲ್ಲವೆ? ಮನೆಯಲ್ಲಿ ಕಾಯಿಲೆಯಿದ್ದರೆ ಒಂದು ತುಂಡು ಬೆಲ್ಲವನ್ನೋ ಕಲ್ಲುಸಕ್ಕರೆ ಹರಳನ್ನೋ ಕೊಡಿ. ನಿಮ್ಮ ಹಬ್ಬದ ಪೂಜೆಯ ಪ್ರಸಾದವನ್ನು ನಾವು ತೆಗೆದುಕೊಳ್ಳುವುದು ತಲತಲಾಂತರದಿಂದ ಬಂದ ಹಳೆಯ ಸಂಪ್ರದಾಯ. ಅಂಗಡಿಯ ಮಿಠಾಯಿಯನ್ನು ಪ್ರಸಾದವೆಂದು ಕೊಡುವುದು ಸರಿಯೇ? ಎಂದು ಆಕ್ಷೇಪಿಸಿದರು.
10. ತಾಯಿ ತನ್ನ ಮಗುವಿನ ಆರೈಕೆಯನ್ನು ಹೇಗೆ ಮಾಡುತ್ತಾಳೆ ಎಂದು ಕೆ. ಎಸ್. ನರಸಿಂಹಸ್ವಾಮಿ ಅವರು ವರ್ಣಿಸುತ್ತಾರೆ?
    ತಾಯಿಯ ಪಕ್ಕದಲ್ಲಿ ಮಲಗಿರುವ ಪುಟ್ಟ ಮಗುವೊಂದು ನಟ್ಟಿರುಳು ತನ್ನ ಹೊದಿಕೆಯನ್ನು ಕಿತ್ತೆಸೆಯುತ್ತದೆ. ನಿದ್ದೆಗಣ್ಣಿನಲ್ಲಿಯೇ ತಾಯಿಯ ಕೈ ಮಗುವಿಗೆ ಹೊದಿಕೆಯನ್ನು ಹೊದಿಸಿ, ಸರಿಪಡಿಸುತ್ತದೆ. ಮಗು ಮತ್ತೆಮತ್ತೆ ಹೊದಿಕೆಯನ್ನು ಕಿತ್ತೆಸೆದರು ನಿದ್ದೆಗಣ್ಣಿನಲ್ಲಿಯೇ ತಾಯಿ ಕೈ ಮಾತ್ರ ಮತ್ತೆಮತ್ತೆ ಹೊದಿಕೆಯನ್ನು ಹೊದಿಸಿ, ಸರಿಪಡಿಸಿ, ತನ್ನ ಮಗುವಿನ ಆರೈಕೆಯನ್ನು ಮಾಡುತ್ತದೆ. ಹೀಗೆ ತಾಯಿಯು ನಿದ್ದೆ–ಎಚ್ಚರಗಳಲ್ಲಿ ಸದಾ ತನ್ನ ಮಗುವಿನ ಆರೈಕೆಯಲ್ಲಿ ತನ್ನ ತಾಯ್ತನದ ಸಾರ್ಥಕ್ಯವನ್ನು ಪಡೆಯುತ್ತಾಳೆ.
11. ನಾವು ಹೊಸನಾಡೊಂದನ್ನು ಹೇಗೆ ಕಟ್ಟುವೆವು ಎಂದು ಗೋಪಾಲಕೃಷ್ಣ ಅಡಿಗ ಅವರು ಹೇಳುತ್ತಾರೆ?
    ಉತ್ಸಾಹ ಉದ್ವೇಗ ಉದ್ರೇಕಗಳ ವೀರ ಯುವಜನರೇ ನಾಡ ಬಾವುಟವು. ಆ ಬಾವುಟದ ಹಾರಾಟಕ್ಕೆ ಆಕಾಶವೇ ಗಡಿ. ಅದರ ಹಾರಾಟವನ್ನು ತಡೆಯುವಂತಹ ಯಾವುದೇ ಶಕ್ತಿಯನ್ನು ಬರಲು ಬಿಡುವುದಿಲ್ಲ. ಅದನ್ನು ತಡೆಯುವ ಶಕ್ತಿ ಉಳ್ಳವರು, ಅದನ್ನು ಹೊಡೆಯುವ ಸಾಮರ್ಥ್ಯ ಉಳ್ಳವರು ಯಾರಾದರೂ ಸಹ ಬನ್ನಿರಿ. ಕೆಡೆ ನುಡಿಯುವ, ಕೆಡೆ ಬಗೆಯುವ ಕೆಡಕು ಜನರೇ ಬನ್ನಿರಿ ನಿಮಗಿದೋ ಹೋರಾಟದ ವೀಳೆಯವನು ಕೊಡುತ್ತಿರುವೆವು. ನಿಮ್ಮೆಲ್ಲರನ್ನು ನಾಶಮಾಡಿ, ನಿಮ್ಮ ಮಸಣದ ಮೇಲೆ ಭವ್ಯವಾದ ಸುಖದ ನಾಡೊಂದನ್ನು ಕಟ್ಟುತ್ತೇವೆ ಎಂದು ಕವಿಯು ಹೇಳುತ್ತಾರೆ.
12. ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಬದುಕು ಹೇಗೆ ಧನ್ಯವಾಗುವುದು?
    ನಮ್ಮ ಹೆಣದ ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಅದು ಕೆಸರಿನೊಡನೆ ಕೂಡಿ ಫಲವತ್ತಾದ ಮಣ್ಣಾಗುತ್ತದೆ. ಅದರಲ್ಲಿ ಕಮಲ ಅರಳಿದಾಗ ನಾವು ಹುಟ್ಟು ಸಾವಿನಿಂದ ಮುಕ್ತರಾಗಿ ನಮ್ಮ ಬದುಕು ಧನ್ಯವಾಗುವುದು.

**IV. ಕೆಳಗಿನ ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**

**2 * 2 = 4**

| | |
|---|---|
| **ಸ್ಥಳ, ಕಾಲ** | **1 ಅಂಕ** |
| **ಕೃತಿ, ಪ್ರಶಸ್ತಿ** | **1 ಅಂಕ** |
| **ಒಟ್ಟು** | **2 ಅಂಕಗಳು** |

13. ನೇಮಿಚಂದ್ರ
    **ಶ್ರೀಮತಿ ನೇಮಿಚಂದ್ರ** ಅವರು **ಕ್ರಿ. ಶ. 1959** ರಲ್ಲಿ **ಚಿತ್ರದುರ್ಗದಲ್ಲಿ** ಜನಿಸಿದರು. ಇವರು **'ಬದುಕು ಬದಲಿಸಬಹುದು'**, 'ಪೆರುವಿನ ಕಣಿವೆಯಲ್ಲಿ', 'ಒಂದು ಕನಸಿನ ಪಯಣ', 'ನಮ್ಮ ಕನಸುಗಳಲ್ಲಿ ನೀವಿದ್ದೀರಿ', **'ಯಾದ್ ವಶೇಮ್'** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

14. ಚೆನ್ನವೀರ ಕಣವಿ
**ಶ್ರೀ ಚೆನ್ನವೀರಕಣವಿ ಅವರು ಕ್ರಿ. ಶ. 1928** ರಲ್ಲಿ ಗದಗ ಜಿಲ್ಲೆಯ **ಹೊಂಬಳದಲ್ಲಿ** ಜನಿಸಿದರು. ಇವರು **ಆಕಾಶ ಬುಟ್ಟಿ,** ಭಾವಜೀವಿ, ಮಧುಚಂದ್ರ, ದೀಪಧಾರಿ, ಮಣ್ಣಿನ ಮೆರೆವಣಿಗೆ, ನೆಲಮುಗಿಲು, ಕಾವ್ಯಾಕ್ಷಿ, ಚಿರಂತನ ದಾಹ ಮೊದಲಾದ ಕವನ ಸಂಕಲನಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಕರ್ನಾಟಕ ಅಕಾಡೆಮಿ ಗೌರವ ಪ್ರಶಸ್ತಿ, ಕ್ರಿ. ಶ. 1981 ರಲ್ಲಿ **'ಜೀವಧ್ವನಿ'** ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 2 * 2 = 4**

| | |
|---|---|
| **ಆಯ್ಕೆ : ಕರ್ತೃ – ಆಕರ – ಪಠ್ಯ** | **1 ಅಂಕ** |
| **ಸಂದರ್ಭ : ಯಾರು – ಯಾರಿಗೆ – ಯಾವಾಗ** | **1 ಅಂಕ** |
| **ಒಟ್ಟು** | **2 ಅಂಕಗಳು** |

15. **"**ಅದು ಕಲಾಶ್ರೀ ವಿಹರಿಸುವ ನಂದನವನ**"**
**ಆಯ್ಕೆ :–** ಪ್ರಸ್ತುತ ವಾಕ್ಯವನ್ನು ಶ್ರೀ **ಹಿರೇಮಲ್ಲೂರು ಈಶ್ವರನ್** ಅವರು ಬರೆದಿರುವ **'ಕವಿಕಂಡ ನಾಡು'** ಎಂಬ ಪ್ರವಾಸ ಕಥನದಿಂದ ಆಯ್ದ **'ತಲಕಾಡಿನ ವೈಭವ'** ಎಂಬ ಪ್ರವಾಸ ಕಥನದಿಂದ ಆರಿಸಿಕೊಳ್ಳಲಾಗಿದೆ.
**ಸಂದರ್ಭ :– "**ಹತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಮುದುವೊಳಲಿನಿಂದ ರನ್ನನು ತಂದೆತಾಯಿಯರಿಗೆ ಹೇಳದೆ ಬಳೆ ಮಾರುವ ಉದ್ಯಮವನ್ನು ಕೃಷ್ಣಾ ತೀರದ ಮಳಲಿನಲ್ಲಿ ಮುಚ್ಚಿಟ್ಟು ತಲಕಾಡಿಗೆ ಬಂದನು. ಹಾಗೆ ಬರಲು ಕಾರಣ ಇಲ್ಲಿನ ಮಣ್ಣಿನಲ್ಲಿದ್ದ ಕಲಾ ಪೋಷಕರಾದ ಚಾವುಂಡರಾಯ, ಅತ್ತಿಮಬ್ಬೆ**"** ಎಂದು ಲೇಖಕರು ಹೇಳುವಾಗ ಈ ಮಾತು ಬಂದಿದೆ.
**ಸ್ವಾರಸ್ಯ :–** ಅಂದಿನ ಕಾಲಕ್ಕೆ ತಲಕಾಡು ಕಲಾವಿದರಿಗೆ ಆಶ್ರಯ ತಾಣವಾಗಿತ್ತು ಎಂಬುದನ್ನು ಲೇಖಕರು ಈ ಮಾತಿನ ಮೂಲಕ ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸಿದ್ದಾರೆ.

16. **"**ಅಮರ ಪ್ರೇಮದ ಒರತೆ ಹರಿಯುವುದು ಉಂಟು ಅಲ್ಲಲ್ಲಿ**"**
ಪ್ರಸ್ತುತ ವಾಕ್ಯವನ್ನು **ಶ್ರೀಮತಿ ಬಿ.ಟಿ. ಲಲಿತಾ ನಾಯಕ್** ಅವರು ರಚಿಸಿರುವ **'ಬಿದಿರು ಮೆಳೆ ಕಂಟಿಯಲಿ'** ಎಂಬ ಕವನ ಸಂಕಲನದಿಂದ ಆಯ್ದ **'ಭರವಸೆ'** ಎಂಬ ಕವನದಿಂದ ಆರಿಸಲಾಗಿದೆ.
**ಸಂದರ್ಭ :–** ಮನುಷ್ಯನು ಸ್ವಾರ್ಥದಿಂದ ಮಾವು, ಮಲ್ಲಿಗೆ, ಭ್ರಮರದ ಝೇಂಕಾರ, ಕವಿ ಕಲ್ಪನೆಯ ಗಾನಲಹರಿ, ಎಲ್ಲವನ್ನೂ ಮರೆತಿದ್ದಾನೆ. ಆದರೆ ಈ ಭೂಮಿ ಬರಡಲ್ಲ. ಎಂದೂ ಹೇಳುತ್ತಾ, ಕೋಗಿಲೆಯು ತನ್ನ ಆಶಾವಾದವನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ಮಲ್ಲಿಗೆಗೆ ಈ ಮಾತನ್ನು ಹೇಳುತ್ತದೆ.
**ಸ್ವಾರಸ್ಯ :–** ಮಾನವನ ಅಂತರಂಗದಲ್ಲಿ ಅಡಗಿರುವ ಪ್ರಕೃತಿ ಪ್ರೇಮವನ್ನು ಕವಿಗಳು ಗುರುತಿಸಿ, ಈ ಮಾತಿನ ಮೂಲಕ ತಮ್ಮ ಆಶಾವಾದವನ್ನು ಸ್ವಾರಸ್ಯಪೂರ್ಣವಾಗಿ ವರ್ಣಿಸಿದ್ದಾರೆ.

**VI. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1 * 2 = 2**

**(ತಪ್ಪಿಲ್ಲದೆ ಬರೆದ ಎರಡು ಪೂರ್ಣ ಸಾಲಿಗೆ 1 ಅಂಕ)**

17. ಜೈನರಾದ ಪೂಜ್ಯಪಾದ ಕೊಂಡಕುಂದವರ್ಯರ,
ಮಧ್ವಯತಿಯೇ ಬಸವಪತಿಯೇ ಮುಖ್ಯ ಮತಾಚಾರ್ಯರ,
ಶರ್ವ ಪಂಪ ರನ್ನರ,
ಲಕ್ಷ್ಮೀಪತಿ ಜನ್ನರ,

ಅಥವಾ

ಲಕ್ಷ್ಮೀಪತಿ ಜನ್ನರ,
ಷಡಕ್ಷರಿ ಮುದ್ದಣರ,
ಪುರಂದರ ವರೇಣ್ಯರ,
ತಾಯೇ, ನಿನ್ನ ಬಸಿರೆ ಹೊನ್ನಗನಿ ವಿದ್ಯಾರಣ್ಯರ!

**VII. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಆಧರಿಸಿ ಸಾರಾಂಶವನ್ನು ಬರೆಯಿರಿ.** **1 * 2 = 2**

| | |
|---|---|
| ಮೌಲ್ಯವನ್ನು ಗುರುತಿಸುವುದು | 1. ಅಂಕ |
| ಸಾರಾಂಶ ಬರೆಯುವುದಕ್ಕೆ, ಭಾಷಾ ಶೈಲಿ | 1. ಅಂಕಗಳು |
| ಒಟ್ಟು | 2. ಅಂಕಗಳು |

18. ಉಪ್ಪಿಗಿಂತ ರುಚಿಯು ತಾಯಿಗಿಂತಲು ಬಂಧು
ಇಲ್ಲೆಂಬ ಗಾದೆನುಡಿ ಕೇಳಿರುವೆನು.
ಗೆಳೆತನದ ಶುಚಿರುಚಿಯು ಇದಕು ಮಿಗಿಲಾಗಿಹುದು
ಎಂಬ ಸಾಹಸ ಮಾಡೆ ದೋಷವೇನು?
ಕಂಡ ಕಂಡವರೇನು ಬಲ್ಲರಿದನು
ಉಂಡವನು ಕಂಡಿಹನು ಇದರ ಹದನು.

ಪ್ರಸ್ತುತ ಪದ್ಯಭಾಗವನ್ನು ಶ್ರೀ ಚೆನ್ನವೀರ ಕಣವಿ ಅವರು ರಚಿಸಿರುವ 'ಆಕಾಶಬುಟ್ಟಿ' ಎಂಬ ಕವನಸಂಕಲನದಿಂದ ಆಯ್ದ 'ಗೆಳೆತನ' ಎಂಬ ಕವನದಿಂದ ಆರಿಸಲಾಗಿದೆ.
ಗೆಳೆತನದ ಶುಚಿರುಚಿಯ ಮಹತ್ವವನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಕವಿಗಳು ಈ ಮಾತನ್ನು ಹೇಳುತ್ತಾರೆ. ಗೆಳೆತನದ ಶುಚಿರುಚಿಯು ಉಪ್ಪಿಗಿಂತಲೂ ಹೆಚ್ಚು, ತಾಯಿಯ ಬಂಧುತ್ವಕ್ಕಿಂತಲೂ ಹೆಚ್ಚು. ಆದರೆ ಇದರ ರುಚಿಯನ್ನು ಕಂಡ ಕಂಡವರೆಲ್ಲರೂ ಕಾಣಲಾಗುವುದಿಲ್ಲ. ಯಾರು ಗೆಳೆತನವನ್ನು ಮಾಡಿರುತ್ತಾರೋ ಅವರು ಮಾತ್ರ ಇದರ ಹದವನ್ನು ಬಲ್ಲರು ಎಂದು ಕವಿ ಹೇಳುತ್ತಾರೆ.
ಈ ಪದ್ಯಭಾಗದಲ್ಲಿ ಗೆಳೆತನ, ಪ್ರಾಮಾಣಿಕತೆ, ನಂಬಿಕೆ ಮೊದಲಾದ ಮೌಲ್ಯಗಳನ್ನು ಕಾಣಬಹುದಾಗಿದೆ.

**VIII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1 * 4 = 4**

| | |
|---|---|
| ಉತ್ತರದ ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ | 3 ಅಂಕ |
| ಭಾಷಾ ಶೈಲಿ – ಪದಬಂಧ | 1 ಅಂಕಗಳು |
| ಒಟ್ಟು | 3 ಅಂಕಗಳು |

19. ಡಿ. ವಿ. ಜಿ. ಅವರ ವ್ಯಕ್ತಿತ್ವದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.
ಡಿವಿಜಿ ಅವರು ಆಧುನಿಕ ಕನ್ನಡ ಸಾಹಿತ್ಯದ ದಿಗ್ಗಜರಲ್ಲಿ ಒಬ್ಬರು. ಕನ್ನಡ ಸಾರಸ್ವತ ಲೋಕದ ಭೀಷ್ಮ ಎಂದು ಕರೆಸಿಕೊಂಡವರು. ಅವರದ್ದು ಹೋಲಿಕೆ ಇಲ್ಲದ ಅಪೂರ್ವ ವ್ಯಕ್ತಿತ್ವ. ಇತರ ಸಾಹಿತಿಗಳಂತೆ ಅವರು ಸಾಹಿತಿ ಮಾತ್ರವಾಗಿರಲಿಲ್ಲ. ಹೆಸರಾಂತ ಪತ್ರಕರ್ತರಾಗಿದ್ದರು. ಹಿರಿಯ ವೇದಾಂತಿಯಾಗಿದ್ದರು. ರಾಜ್ಯಶಾಸ್ತ್ರದಲ್ಲಿ ಆಳವಾದ ತಿಳಿವಳಿಕೆಯುಳ್ಳವರಾಗಿದ್ದರು. ಸಾರ್ವಜನಿಕ ಜೀವನಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳ ಮಂಥನಕ್ಕಾಗಿ 'ಗೋಖಲೆ ಸಾರ್ವಜನಿಕ ಸಂಸ್ಥೆ' ಕಟ್ಟಿದ ಮಹಾಧೀಮಂತರಾಗಿದ್ದರು. ಡಿವಿಜಿ ಅವರು ದೊಡ್ಡ ಡಿಗ್ರಿ ಪಡೆದವರೂ ಅಲ್ಲ, ಭಾರಿ ಶ್ರೀಮಂತರೂ ಅಲ್ಲ, ದೊಡ್ಡ ಅಧಿಕಾರಿಯೂ ಅಲ್ಲ. ಆದರೂ ಮೈಸೂರು ರಾಜ್ಯದ ಪರಮೋಚ್ಚ ಅಧಿಕಾರ ಹಿಡಿದಿದ್ದ ಮಿರ್ಜಾ ಸಾಹೇಬರೂ ಅವರ ಸ್ನೇಹ ತಪ್ಪಿತೆನಿಸಿ ಕಳವಳಗೊಂಡಿದ್ದರು. ಇಂತಹ ವ್ಯಕ್ತಿತ್ವ ಅವರಿಗೆ ಬಂದಿದ್ದು ಕೇವಲ ಶೀಲ, ವಿವೇಕ, ನಿಸ್ಪೃಹತೆ, ಸ್ವಯಂ ಆರ್ಜಿತ ಪಾಂಡಿತ್ಯ, ಸಾರ್ವಜನಿಕ ಹಿತಾಸಕ್ತಿಗಳ ಬಲದಿಂದ. ಮಿರ್ಜಾರ ಕಾಲಕ್ಕೆ ಅವರು ದೊಡ್ಡ ಮೇಧಾವಿಯೆಂದು ವಿದ್ಯಾವಂತರ ವಲಯದಲ್ಲಿ ಹೆಸರಾಗಿದ್ದರು.

ಅಥವಾ

ಡಿ. ವಿ. ಜಿ. ಅವರಿಗೂ ಅವರ ಶ್ರೀಮತಿ ಅವರಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

ಒಮ್ಮೆ ಡಿವಿಜಿ ಅವರು ತಮ್ಮ ಬಂಧುಗಳ ಮನೆಯಲ್ಲಿ ನಡೆದ ಉತ್ಸವಕ್ಕೆ ಹೋಗಲಾಗದ್ದರಿಂದ ತಮ್ಮ ಹೆಂಡತಿ ಮಕ್ಕಳಿಗೆ ಹೋಗಲು ತಿಳಿಸಿದರು. ಎಷ್ಟು ಹೊತ್ತಾದರೂ ಹೆಂಡತಿ ಮನೆಯಲ್ಲೇ ಇದ್ದಿದ್ದನ್ನು ಕಂಡು ಡಿವಿಜಿ ಅಸಮಾಧಾನಗೊಂಡು "ನೀನು ಉತ್ಸವಕ್ಕೆ ಹೋಗುವುದಿಲ್ಲವೇ?" ಎಂದರು. ಆಗ ಅವರ ಹೆಂಡತಿ "ಮಕ್ಕಳನ್ನು ಕಳುಹಿಸಿದ್ದೇನೆ. ಮನೆಯಲ್ಲಿ ಯಾರಾದರೂ ಇರಬೇಕಲ್ಲ." ಎಂದು ಏನೇನೋ ಸಬೂಬು ಹೇಳಿದರೂ ಅವರು ಅದಕ್ಕೆ ಒಪ್ಪಲಿಲ್ಲ. ಆಗ ನಿಜವಾದ ಕಾರಣ ಹೊರಬರಲೇ ಬೇಕಾಯಿತು, ಡಿವಿಜಿ ಅವರ ಹೆಂಡತಿ "ನಾನು

ಹೇಳಬಾರದೆಂದಿದ್ದೆ. ನೀವು ಪಟ್ಟು ಹಿಡಿದು ಬಾಯಿಬಿಡಿಸುತ್ತಿದ್ದೀರಿ. ನನ್ನ ಹತ್ತಿರ ಇರುವುದು ಇದೊಂದೇ ಸೀರೆ. ಇದೂ ಒಂದೆರಡು ಕಡೆ ಹರಿದಿದೆ. ನಾನು ಈ ಬಟ್ಟೆಯಲ್ಲಿ ಹೊರಗೆ ಕಾಣಿಸಿಕೊಂಡರೆ ಜನ ನಿಮ್ಮನ್ನು ಕುರಿತು ಆಡಿಕೊಳ್ಳುವುದಿಲ್ಲವೇ? ಬಂಧುಗಳ ಮನೆಗೆ ಹೋಗಿ ಬರುವುದು ಹೇಗೆ ನನಗೆ ಕರ್ತವ್ಯವೋ ಹಾಗೆ ನಿಮ್ಮ ಮರ್ಯಾದೆಗೆ ಊನಬಾರದಂತೆ ನಡೆದುಕೊಳ್ಳುವುದೂ ನನಗೆ ಕರ್ತವ್ಯವೇ ಅಲ್ಲವೇ?" ಎಂದು ಬಂಧುಗಳ ಮನೆಗೆ ಹೋಗದ್ದಕ್ಕೆ ಕಾರಣ ತಿಳಿಸಿದರು.

**IX. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 01*04 =04 (2+2)**
**(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)**

20. ಮಹಾತ್ಮ ಬಸವಣ್ಣನವರು ಕಟ್ಟಬಯಸಿದ್ದು ಸರ್ವಶೋಷಣೆಗಳಿಂದಲೂ ಮುಕ್ತವಾದ, ಸ್ವಾತಂತ್ರ್ಯ, ಸಮಾನತೆ, ಸೌಹಾರ್ದಗಳ ಅಡಿಗಲ್ಲಿನ ಮೇಲೆ ನಿಂತ, ಸರ್ವೋದಯ ನಿಷ್ಠವಾದ ಒಂದು ಆದರ್ಶ ಸಮಾಜವನ್ನು. ಅವರು ಕಲ್ಪಿಸಿಕೊಂಡು ಕಟ್ಟಬಯಸಿದ ನೂತನ ಸಮಾಜದ ಒಂದು ಮುಖ್ಯಾಧಾರವೆಂದರೆ ಕಾಯಕ ತತ್ತ್ವ. ಕಾಯಕಕ್ಕೆ ಬಸವಣ್ಣನವರಿತ್ತ ಪ್ರಾಧಾನ್ಯ ಅತ್ಯಂತ ಗಮನಾರ್ಹವಾದುದು. ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಏನಾದರೊಂದು ದೈಹಿಕವಾದ ಕೆಲಸ ಮಾಡಬೇಕು, ಅದರಿಂದಲೇ ಜೀವನ ನಡೆಸಬೇಕು ಎಂಬುದು ಕಾಯಕ ತತ್ತ್ವದ ಒಂದು ಮುಖವಾದರೆ, ಯಾವ ಕೆಲಸವೂ ಕೀಳಲ್ಲ ಪ್ರತಿಯೊಂದು ಕೆಲಸವೂ ಪವಿತ್ರ ಎನ್ನುವುದು ಇನ್ನೊಂದು ಮುಖ. ಅನೇಕ ಸಾಮಾಜಿಕ ಆರ್ಥಿಕ ಸಮಸ್ಯೆಗಳಿಗೆ ರಾಮಬಾಣವಾಗಬಲ್ಲುದು ಈ ಕಾಯಕ ತತ್ತ್ವ ಸಮಾಜದ ಅಸಮತೆ, ದಾರಿದ್ರ್ಯಗಳನ್ನು ನಿವಾರಿಸುವ ಏಕೈಕ ಮಂತ್ರವಾಗಿದೆ. 'ಕಾಯಕವೇ ಕೈಲಾಸ'.

ಬಸವಣ್ಣನವರು ಸಂಸಾರ ತ್ಯಾಗವನ್ನು ವಿರೋಧಿಸುವುದಿಲ್ಲ. ಸಂಸಾರದಲ್ಲಿದ್ದುಕೊಂಡೇ ಪರಮಾರ್ಥವನ್ನು ಸಾಧಿಸುವ ಕಲೆಯನ್ನು ಅವರು ಉಪದೇಶಿಸಿದ್ದಾರೆ. ಅಂತರಂಗ–ಬಹಿರಂಗಗಳ ಸಾಮರಸ್ಯವನ್ನು ಅವರು ವಿಶೇಷವಾಗಿ ಒತ್ತಿ ಹೇಳಿದ್ದಾರೆ. ಒಳ್ಳೆಯ ಆಲೋಚನೆ, ಆಲೋಚನೆಗೆ ತಕ್ಕ ನುಡಿ, ನುಡಿಗೆ ತಕ್ಕ ನಡೆ ಇವುಗಳನ್ನು ಬೋಧಿಸಿದ್ದಾರೆ. 'ನುಡಿಗೆ ತಕ್ಕ ನಡೆಯ ಕಂಡರೆ ಕೂಡಲಸಂಗಮದೇವ ತನ್ನೊಳಗಿರ್ಪನಯ್ಯ' ಎಂಬುದು ಅವರ ಆಶ್ವಾಸನೆ. ಅಂತರಂಗದ ಅರಿವು, ಬಹಿರಂಗದ ಕ್ರಿಯೆ ಎರಡಕ್ಕೂ ಅವರು ಸಮಾನ ಪುರಸ್ಕಾರ ನೀಡಿದ್ದಾರೆ.

**ಪ್ರಶ್ನೆಗಳು**

ಅ. ಕಾಯಕ ತತ್ತ್ವ ಸಮಾಜದ ಅಸಮತೆ, ದಾರಿದ್ರ್ಯಗಳನ್ನು ನಿವಾರಿಸುವ ಏಕೈಕ ಮಂತ್ರವಾಗಿದೆ ಏಕೆ?

ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಏನಾದರೊಂದು ದೈಹಿಕವಾದ ಕೆಲಸ ಮಾಡಬೇಕು, ಅದರಿಂದಲೇ ಜೀವನ ನಡೆಸಬೇಕು ಎಂಬುದು ಕಾಯಕ ತತ್ತ್ವದ ಒಂದು ಮುಖವಾದರೆ, ಯಾವ ಕೆಲಸವೂ ಕೀಳಲ್ಲ ಪ್ರತಿಯೊಂದು ಕೆಲಸವೂ ಪವಿತ್ರ ಎನ್ನುವುದು ಇನ್ನೊಂದು ಮುಖ. ಅನೇಕ ಸಾಮಾಜಿಕ ಆರ್ಥಿಕ ಸಮಸ್ಯೆಗಳಿಗೆ ರಾಮಬಾಣವಾಗಬಲ್ಲುದು ಈ ಕಾಯಕ ತತ್ತ್ವ ಸಮಾಜದ ಅಸಮತೆ, ದಾರಿದ್ರ್ಯಗಳನ್ನು ನಿವಾರಿಸುವ ಏಕೈಕ ಮಂತ್ರವಾಗಿದೆ.

ಆ. ಬಸವಣ್ಣ ಅವರು ಅಂತರಂಗದ ಅರಿವು, ಬಹಿರಂಗದ ಕ್ರಿಯೆ ಎರಡಕ್ಕೂ ಹೇಗೆ ಸಮಾನ ಪುರಸ್ಕಾರ ನೀಡಿದ್ದಾರೆ?

ಬಸವಣ್ಣನವರು ಸಂಸಾರ ತ್ಯಾಗವನ್ನು ವಿರೋಧಿಸುವುದಿಲ್ಲ. ಸಂಸಾರದಲ್ಲಿದ್ದುಕೊಂಡೇ ಪರಮಾರ್ಥವನ್ನು ಸಾಧಿಸುವ ಕಲೆಯನ್ನು ಅವರು ಉಪದೇಶಿಸಿದ್ದಾರೆ. ಅಂತರಂಗ–ಬಹಿರಂಗಗಳ ಸಾಮರಸ್ಯವನ್ನು ಅವರು ವಿಶೇಷವಾಗಿ ಒತ್ತಿ ಹೇಳಿದ್ದಾರೆ. ಒಳ್ಳೆಯ ಆಲೋಚನೆ, ಆಲೋಚನೆಗೆ ತಕ್ಕ ನುಡಿ, ನುಡಿಗೆ ತಕ್ಕ ನಡೆ ಇವುಗಳನ್ನು ಬೋಧಿಸಿದ್ದಾರೆ. 'ನುಡಿಗೆ ತಕ್ಕ ನಡೆಯ ಕಂಡರೆ ಕೂಡಲಸಂಗಮದೇವ ತನ್ನೊಳಗಿರ್ಪನಯ್ಯ' ಎಂಬುದು ಅವರ ಆಶ್ವಾಸನೆ. ಅಂತರಂಗದ ಅರಿವು, ಬಹಿರಂಗದ ಕ್ರಿಯೆ ಎರಡಕ್ಕೂ ಅವರು ಸಮಾನ ಪುರಸ್ಕಾರ ನೀಡಿದ್ದಾರೆ.

**X. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ, ಪತ್ರ ಬರೆಯಿರಿ. 1 * 4 = 4**

| | |
|---|---|
| **ಇಂದ, ಗೆ, ಸಂಬೋಧನೆ, ವಿಷಯ** | **1 ಅಂಕ** |
| **ಪತ್ರದ ಒಡಲು – ವಿಷಯ ನಿರೂಪಣೆ** | **1 ಅಂಕಗಳು** |
| **ಮುಕ್ತಾಯ, ಇಂತಿ, ಸ್ಥಳ, ದಿನಾಂಕ** | **1 ಅಂಕ** |
| **ಭಾಷಾ ಶೈಲಿ, ಪದಬಂಧ, ವಿನ್ಯಾಸ** | **1 ಅಂಕ** |
| **ಒಟ್ಟು** | **4 ಅಂಕಗಳು** |

**ಅಥವಾ**

| | |
|---|---|
| **ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ** | **1 ಅಂಕ** |
| **ಒಡಲು / ಸಮರ್ಥ ವಿವರಣೆಯೊಂದಿಗೆ ವಿಷಯ ನಿರೂಪಣೆ** | **1 ಅಂಕಗಳು** |
| **ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ** | **1 ಅಂಕ** |
| **ಭಾಷಾ ಶೈಲಿ, ಪದಬಂಧ** | **1 ಅಂಕ** |
| **ಒಟ್ಟು** | **3 ಅಂಕಗಳು** |

21. ನಿಮ್ಮನ್ನು ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಬಿದರಗೂಡು ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಅನುಶ್ರೀ' ಭಾವಿಸಿಕೊಂಡು, ನೆರೆ ಹಾವಳಿಯಿಂದ ನೊಂದ ಸಂತ್ರಸ್ತರಿಗೆ ಪರಿಹಾರವನ್ನು ದೊರಕಿಸಿ ಕೊಡುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆಯಿರಿ.

**ಇಂದ**

ಅನುಶ್ರೀ
8 ನೆಯ ತರಗತಿ
ಸರ್ಕಾರಿ ಪ್ರೌಢಶಾಲೆ
ಬಿದರಗೂಡು
ನಂಜನಗೂಡು ತಾಲೂಕು
ಮೈಸೂರು ಜಿಲ್ಲೆ

ದಿನಾಂಕ : 23–09–2019
ಸ್ಥಳ : ಬಿದರಗೂಡು

ಇವರಿಗೆ

ಮಾನ್ಯ ಜಿಲ್ಲಾಧಿಕಾರಿಗಳು
ಮೈಸೂರು ಜಿಲ್ಲೆ
ಮೈಸೂರು

ಮಾನ್ಯರೇ

ವಿಷಯ : ನೆರೆ ಹಾವಳಿಯಿಂದ ನೊಂದ ಸಂತ್ರಸ್ತರಿಗೆ ಪರಿಹಾರ ದೊರಕಿಸಿ ಕೊಡುವಂತೆ ಕೋರಿ ಮನವಿ.

ಮೈಸೂರು ಜಿಲ್ಲೆ ನಂಜನಗೂಡು ತಾಲೂಕಿನಲ್ಲಿ ಕಬಿನಿ ನದಿಯ ಪ್ರವಾಹದಿಂದ ಅನೇಕ ಗ್ರಾಮಗಳು ನೀರಿನಲ್ಲಿ ಮುಳುಗಡೆಯಾಗಿ ಜನರು ಸಂಕಷ್ಟಕ್ಕೆ ಈಡಾಗಿದ್ದಾರೆ. ಹೊಲಗದ್ದೆಗಳು ನೀರಿನಲ್ಲಿ ಮುಳುಗಡೆಯಾಗಿವೆ. ಇವರೆಲ್ಲರೂ ಮನೆಮಠಗಳನ್ನು ಕಳೆದುಕೊಂಡು ನಿರ್ಗತಿಕರಾಗಿದ್ದಾರೆ. ಆದ್ದರಿಂದ ತಾವು ದಯವಿಟ್ಟು ಈ ಬಗ್ಗೆ ಗಮನಹರಿಸಿ ನೆರೆ ಹಾವಳಿಯಿಂದ ನೊಂದ ಸಂತ್ರಸ್ತರಿಗೆ ಸೂಕ್ತ ಪರಿಹಾರವನ್ನು ದೊರಕಿಸಿ ಕೊಡಬೇಕೆಂದು ಸವಿನಯದಿಂದ ಕೇಳಿಕೊಳ್ಳುತ್ತೇನೆ. ಈ ನನ್ನ ಕೋರಿಕೆಯು ಬಹುಬೇಗ ಈಡೇರುವುದೆಂದು ನಂಬಿರುತ್ತೇನೆ.

ವಂದನೆಗಳೊಡನೆ

ತಮ್ಮ ನಂಬುಗೆಯ
ಸಹಿ/–
ಅನುಶ್ರೀ

ಹೊರ ವಿಳಾಸ

| ಇಂದ | ಇವರಿಗೆ |
|---|---|
| ಅನುಶ್ರೀ<br>8 ನೆಯ ತರಗತಿ<br>ಸರ್ಕಾರಿ ಪ್ರೌಢಶಾಲೆ<br>ಬಿದರಗೂಡು<br>ನಂಜನಗೂಡು ತಾಲೂಕು<br>ಮೈಸೂರು ಜಿಲ್ಲೆ | ಮಾನ್ಯ ಜಿಲ್ಲಾಧಿಕಾರಿಗಳು<br>ಮೈಸೂರು ಜಿಲ್ಲೆ<br>ಮೈಸೂರು |

ಅಥವಾ

'ರಾಷ್ಟ್ರೀಯ ಹಬ್ಬಗಳು' ಎಂಬ ವಿಷಯವನ್ನು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.

**ಪ್ರಸ್ತಾವನೆ :–** ದೇಶ ಪ್ರೇಮ ಹಾಗೂ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳು ಮಹತ್ತ್ವದ ಸ್ಥಾನವನ್ನು ವಹಿಸುತ್ತವೆ. ರಾಷ್ಟ್ರೀಯ ಹಬ್ಬಗಳು ರಾಷ್ಟ್ರದ ಜನರಲ್ಲಿರುವ ಜಾತಿ, ಮತ, ವರ್ಣ, ಧರ್ಮ, ಭಾಷೆ, ಪ್ರಾಂತ್ಯ ಭೇದಭಾವಗಳನ್ನು ಹೋಗಲಾಡಿಸಿ ನಾವೆಲ್ಲರೂ ಒಂದೇ ಎಂಬ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುತ್ತವೆ. ಆದ್ದರಿಂದ ರಾಷ್ಟ್ರೀಯ ಹಬ್ಬಗಳನ್ನು ಬಹು ವಿಜೃಂಭಣೆಯಿಂದ ಆಚರಿಸಬೇಕು.
**ವಿಷಯ ನಿರೂಪಣೆ :–** ನಮ್ಮ ಭಾರತ ದೇಶದಲ್ಲಿ ಆಗಸ್ಟ್ 15 ರ ಸ್ವಾತಂತ್ರ್ಯೋತ್ಸವ, ಜನವರಿ 26 ರ ಗಣರಾಜ್ಯೋತ್ಸವ, ಅಕ್ಟೋಬರ್ 2 ಮಹಾತ್ಮ ಗಾಂಧೀ ಹಾಗೂ ಲಾಲ್ ಬಹಾದ್ದೂರ್ ಶಾಸ್ತ್ರಿ ಅವರ ಜಯಂತಿ, ನವೆಂಬರ್ 14 ರ ಮಕ್ಕಳ ದಿನಾಚರಣೆ, ಸೆಪ್ಟೆಂಬರ್ 5 ಶಿಕ್ಷಕರ ದಿನಾಚರಣೆ, ಏಪ್ರಿಲ್ 14 ರ ಅಂಬೇಡ್ಕರ್ ಜಯಂತಿ ಮೊದಲಾದ ದಿನಗಳನ್ನು ರಾಷ್ಟ್ರೀಯ ಹಬ್ಬಗಳು ಎಂದು ಆಚರಿಸಲಾಗುತ್ತದೆ. ರಾಷ್ಟ್ರದಲ್ಲಿ ವಾಸಿಸುವ ಜನರೆಲ್ಲರೂ ಒಗ್ಗೂಡಿ ಆಚರಿಸಬೇಕಾದ ಹಬ್ಬದ ದಿನಗಳಿವು. ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ, ರಕ್ಷಣೆಗಾಗಿ, ಏಳಿಗೆಗಾಗಿ ದುಡಿದ ಮಹನೀಯರುಗಳನ್ನು ಸ್ಮರಿಸುವ ದಿನಗಳಿವು. ನಮ್ಮ ಹಿರಿಯರ ತ್ಯಾಗ, ಬಲಿದಾನಗಳ ಮಹತ್ತ್ವವನ್ನು ಅರಿಯುವ ದಿನಗಳಿವು. ಮುಂದಿನ ಜನಾಂಗಕ್ಕೆ ನಮ್ಮ ದೇಶದ ಸಮಗ್ರತೆ ಮತ್ತು ಏಕತೆಯನ್ನು ಕಾಪಾಡುವಂತೆ ದೀಕ್ಷೆ ಕೊಡುವ ದಿನಗಳಿವು. ರಾಷ್ಟ್ರಭಕ್ತರ ಜೀವನ, ಸಾಧನೆಗಳನ್ನು ಮಕ್ಕಳಿಗೆ ತಿಳಿಸಿ ಹೇಳುವ ದಿನಗಳಿವು. ನಮ್ಮ ದೇಶವನ್ನು ಸಂರಕ್ಷಣೆ ಮಾಡುವ ವೀರ ಸೈನಿಕರಿಗೆ ಗೌರವ ಸೂಚಿಸುವ ದಿನಗಳಿವು. ಪ್ರತಿಯೊಬ್ಬ ಭಾರತೀಯನು ಸಂಭ್ರಮದಿಂದ ಭಾಗವಹಿಸಿ ತನ್ನ ದೇಶಪ್ರೇಮವನ್ನು ಜಗತ್ತಿಗೆ ಸಾರುವ ಸುದಿನಗಳಿವು. ರಾಷ್ಟ್ರೀಯ ಹಬ್ಬಗಳು ಶಾಲಾಕಾಲೇಜು, ಸರ್ಕಾರಿ ಕಚೇರಿಗಳಲ್ಲಿ ಮಾತ್ರ ಆಚರಿಸುವ ಹಬ್ಬಗಳಾಗಬಾರದು. ಪ್ರತಿ ಮನೆ, ಗ್ರಾಮ, ಪಟ್ಟಣ, ನಗರಗಳಲ್ಲಿ ಜಾತಿ, ಮತ, ವರ್ಣ, ಧರ್ಮ, ಭಾಷೆ, ಪ್ರಾಂತ್ಯ ಭೇದಭಾವಗಳಿಲ್ಲದೆ ಆಚರಿಸುವ ಪ್ರಮುಖ ಹಬ್ಬವಾಗಬೇಕು. ಆಗ ಮಾತ್ರ ನಾವೆಲ್ಲರೂ ಒಂದೇ ಎಂಬ ರಾಷ್ಟ್ರೀಯ ಭಾವೈಕ್ಯತೆಯು ಮೂಡಲು ಸಾಧ್ಯವಾಗುತ್ತದೆ.
**ಉಪಸಂಹಾರ :–** ಒಂದೆಡೆ ಸೇರಿ ಪರಸ್ಪರ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳಬೇಕು. ಪ್ರತಿಯೊಬ್ಬರ ಮನೆ ಮನಗಳಲ್ಲೂ ಹಬ್ಬದ ಸಂಭ್ರಮವಿರಬೇಕು. ನಾವು ಆಚರಿಸುತ್ತಿರುವ ದಿನಗಳ ಮಹತ್ತ್ವದ ಬಗ್ಗೆ ಎಲ್ಲರಿಗೂ ಅರಿವು ಮೂಡಿಸಬೇಕು. ನಮ್ಮ ದೇಶದ ಸ್ವತಂತ್ರ ಸೇನಾನಿಗಳ ಬಗ್ಗೆ ಅಭಿಮಾನ ಮೂಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಪ್ರತಿ ಮನೆ, ಗ್ರಾಮ, ಪಟ್ಟಣ, ನಗರಗಳಲ್ಲಿ ಇದು ನಮ್ಮ ಹಬ್ಬವೆಂಬ ಸಂಭ್ರಮವಿರಬೇಕು ಎಂಬುದು ನನ್ನ ಅಭಿಪ್ರಾಯವಾಗಿದೆ.

---- 0 ----